# 2 ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆ.ಎಮ್.ಎಫ್.ಸಿ. ನ್ಯಾಯಾಲಯ, ನಂಜನಗೂಡು

**ಸಿ.ಸಿ. ಸಂಖ್ಯೆ 656/2020**

ಫಿರ್ಯಾದಿ      ನಂಜನಗೂಡು ಪಟ್ಟಣ ಆರಕ್ಷಕ ಠಾಣೆ

ವಿರುದ್ಧ

ಆರೋಪಿಗಳು      ಶಿವಮ್ಮ ಕೋಂ ರವಿಶಂಕರ್, 50 ವರ್ಷ,
ಮನೆ ನಂ:48, ದೇವಿನಗರ, 3 ನೇ ಕ್ರಾಸ್,
ಬಿ ಬ್ಲಾಕ್, ದೇವಿರಮ್ಮನಹಳ್ಳಿ ಬಡಾವಣೆ, ನಂಜನಗೂಡು.

: ದೋಷಾರೋಪಣೆ :

ಶ್ರೀಮತಿ ವಿನುತ ಡಿ. ಎಸ್., ಬಿ.ಎಸ್ಸಿ (ಪರಿಕಲ್ಚರ್) . ಎಲ್.ಎಲ್.ಬಿ. 2ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ನಂಜನಗೂಡು ಆದ ನಾನು ನಿಮ್ಮ ವಿರುದ್ಧ ರೂಪಿಸಿರುವ ದೋಷಾರೋಪಣೆ ಏನೆಂದರೆ,

ದಿನಾಂಕ 05.02.2020 ರಂದು ಸಂಜೆ 04.15 ಗಂಟೆ ಸಮಯದಲ್ಲಿ ನಂಜನಗೂಡು ಸಂಚಾರಿ ಪೊಲೀಸ್ ಠಾಣಾ ಸರಹದ್ದು ನಂಜನಗೂಡಿನ ಹುಲ್ಲಹಳ್ಳಿ ಬಳಿಯಿರುವ ಎಸ್.ಬಿ.ಐ. ಬ್ಯಾಂಕಿನ ಮುಂಭಾಗ ಪಿಎಸ್ಐ ಹಾಗೂ ಸಿಬ್ಬಂದಿಗಳು ನೋ ಪಾರ್ಕಿಂಗ್ ಸ್ಥಳದಲ್ಲಿ ನಿಲ್ಲಿಸಿದ್ದ ಕೆಎ09-ಹೆಚ್ ಎಲ್-8207 ರ ನಂಬರಿನ ಹೊಂಡಾ ಆಕ್ಟಿವಾ, ಕೆಎ-09-ಹೆಚ್ ಎಫ್-0701 ರ ನಂಬರಿನ ಹೊಂಡಾ ಆಕ್ಟಿವಾ ಸ್ಕೂಟರ್ ಗಳನ್ನು ಠಾಣೆಗೆ ತಂದು ನಿಲ್ಲಿಸಿದಾಗ ಆರೋಪಿಯಾದ ನೀವು ಎ-09-ಹೆಚ್ ಎಲ್-8207 ರ ನಂಬರಿನ ಹೊಂಡಾ ಆಕ್ಟಿವಾದ ಮಾಲೀಕರೆಂದು ಹೇಳಿಕೊಂಡಾಗ ಚಾಸಾ-01 ರವರು ಕುಳಿತುಕೊಳ್ಳಿ ಎಂದು ಕೂರಿಸಿ ಆರೋಪಿಯಾದ ನಿಮಗೆ ನೋ ಪಾರ್ಕಿಂಗ್ ಜಾಗದಲ್ಲಿ ಸ್ಕೂಟರನ್ನು ನಿಲ್ಲಿಸಿದ ಕಾರಣ ದಂಡ ಕಟ್ಟಬೇಕು ಎಂದು ಹೇಳಿದಾಗ ಆರೋಪಿಯಾದ ನೀವು ನಾನು ದಂಡ ಕಟ್ಟುವುದಿಲ್ಲ ಎಂದು ಚಾಸಾ-01 ರವರು ಸಮವಸ್ತ್ರದಲ್ಲಿದ್ದಾಗ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸಲು ಅಡ್ಡಿ ಪಡಿಸಿದ ಕಾರಣ ಆ ಮೂಲಕ ಭಾ ದಂ ಸಂ ಕಲಂ 353 ರಡಿಯಲ್ಲಿ ದಂಡನೀಯವಾದ ಅಪರಾಧವನ್ನು ಎಸಗಿರುವಿರೆಂದು ದೋಷಾರೋಪಿಸಲಾಗಿದೆ.

ಕೊನೆಯದಾಗಿ, ಅದೇ ದಿನ, ಅದೇ ವೇಳೆ ಮತ್ತು ಅದೇ ಸ್ಥಳದಲ್ಲಿ ಆರೋಪಿಯಾದ ನೀವು ಚಾಸಾ-01 ರವರಿಗೆ ಯಾವ ಬೋಳಿ ಮಗನು ಏನೂ ಮಾಡಿಕೊಳ್ಳಲು ಆಗುವುದಿಲ್ಲ ಎಂದು ಕತ್ತೆ ಮುಂಡೆ, ಚಿನಾಲಿ, ಸೂಳೆ ಮಗಳೆ ಎಂದು ಬಾಯಿಗೆ ಬಂದಂತೆ ಅವಾಚ್ಯ ಶಬ್ದಗಳಿಂದ ಬೈದಿದ್ದು ಆ ಮೂಲಕ ಆರೋಪಿಯಾದ ನೀವು ಭಾ ದಂ ಸಂ ಕಲಂ 504 ರಡಿಯಲ್ಲಿ ದಂಡನೀಯವಾದ ಅಪರಾಧವನ್ನು ಎಸಗಿರುವಿರೆಂದು ದೋಷಾರೋಪಿಸಲಾಗಿದೆ.

ಮೇಲ್ಕಂಡ ಆಪಾದನೆಯು ಆರೋಪಿತರಾದ ನಿಮ್ಮನ್ನು ನ್ಯಾಯಾಲಯದ ಅಧಿವಿಚಾರಣೆಯನ್ನು ಎದುರಿಸಬೇಕೆಂದು ಆದೇಶಿಸುತ್ತೇನೆ.

2 ನೇ ಎ.ಸಿ.ಜೆ. ಮತ್ತು ಜೆ.ಎಮ್.ಎಫ್.ಸಿ.
*ನಂಜನಗೂಡು*

### 2 ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆ.ಎಮ್.ಎಫ್.ಸಿ. ನ್ಯಾಯಾಲಯ, ನಂಜನಗೂಡು

**ಸಿ.ಸಿ. ಸಂಖ್ಯೆ 656/2020**

ಫಿರ್ಯಾದಿ ನಂಜನಗೂಡು ಪಟ್ಟಣ ಆರಕ್ಷಕ ಠಾಣೆ

ವಿರುದ್ಧ

ಆರೋಪಿಗಳು ಶಿವಮ್ಮ ಕೋಂ ರವಿಶಂಕರ್, 50 ವರ್ಷ,
ಮನೆ ನಂ:48, ದೇವಿನಗರ, 3 ನೇ ಕ್ರಾಸ್,
ಬಿ ಬ್ಲಾಕ್, ದೇವಿರಮ್ಮನಹಳ್ಳಿ ಬಡಾವಣೆ, ನಂಜನಗೂಡು.

: ಆಪಾದನೆ :

ಪ್ರಶ್ನೆ1 : ಮೇಲ್ಕಂಡ ಎಲ್ಲಾ ಆಪಾದನೆಗಳನ್ನು ಓದಿ ಹೇಳಿದ್ದು ಅರ್ಥವಾಯಿತೇ ?

ಉತ್ತರ : ಅರ್ಥವಾಯಿತು.

ಪ್ರಶ್ನೆ2 : ಸದರೀ ಆಪಾದನೆಗಳನ್ನು ಒಪ್ಪಿಕೊಳ್ಳುವೆಯಾ ಅಥವಾ ವಿಚಾರಣೆಯಾಗಬೇಕೋ?

ಉತ್ತರ : ಇಲ್ಲ. ವಿಚಾರಣೆಯಾಗಲಿ.

ಮೇಲ್ಕಂಡ ಎಲ್ಲಾ ಆಪಾದನೆಗಳನ್ನು ನನ್ನ ಸಮಕ್ಷಮ ಓದಿ ಹೇಳಿ ಆರೋಪಿತನ ಹೇಳಿಕೆಯನ್ನು ಪಡೆದುಕೊಂಡು ಸತ್ಯವಾಗಿದೆ ಎಂದು ದೃಢೀಕರಿಸಲಾಗಿದೆ.

ದಿನಾಂಕ :07.04.2021

2 ನೇ ಎ.ಸಿ.ಜೆ. ಮತ್ತು ಜೆ.ಎಮ್.ಎಫ್.ಸಿ.
ನಂಜನಗೂಡು